# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 952 |
| ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.12.2023 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಜಮೀನು, ಖಾಸಗಿ ಸಂಘ ಸಂಸ್ಥೆಗಳಿಗೆ ಸಾರ್ವಜನಿಕ ಉದ್ದೇಶಗಳಿಗಾಗಿ ಮಂಜೂರಾತಿ ಕೋರಿರುವ ಸಂದರ್ಭದಲ್ಲಿ ಪ್ರಸ್ತುತ ನಿಯಮಾವಳಿ ಅನುಸಾರ ಅವಕಾಶ ತಡೆಹಿಡಿಯಲಾಗಿರುವುದರಿಂದ ಸದುದ್ದೇಶದ ಕೋರಿಕೆಗಳಿಗೆ ತೊಂದರೆ ಉಂಟಾಗಿದ್ದು, ಸದರಿ ನಿಯಮವನ್ನೇ ಸರ್ಕಾರವು ಪುನರ್ ಪರಿಶೀಲನೆ ಮಾಡುವುದೇ; (ಮಾಹಿತಿ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯೂ ಒಳಗೊಂಡಂತೆ ರಾಜ್ಯದ ಎಲ್ಲಾ ಪ್ರದೇಶಗಳಲ್ಲಿ ಸರ್ಕಾರಿ ಜಮೀನನ್ನು ಅನಿವಾರ್ಯ ಪ್ರಕರಣಗಳಲ್ಲಿ ಖಾಸಗಿ ಸಂಘ ಸಂಸ್ಥೆಗಳಿಗೆ ಜಿಲ್ಲಾಧಿಕಾರಿ/ಪ್ರಾದೇಶಿಕ ಆಯುಕ್ತರ ಶಿಫಾರಸ್ಸು ಅಥವಾ ಸ್ವತಃ ಸರ್ಕಾರವೇ ಸದರಿ ನಿಯಮಗಳ ಯಾವುದೇ ಉಪಬಂಧಗಳನ್ನು ಸಡಿಲಗೊಳಿಸುವುದು ನ್ಯಾಯವೆಂದು ಮತ್ತು ಯುಕ್ತವೆಂದು ಕಂಡುಬಂದಲ್ಲಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ರ ನಿಯಮ 27 ರಂತೆ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸಚಿವ ಸಂಪುಟದ ಅನುಮೋದನೆಯೊಂದಿಗೆ ನಿಯಮಗಳನ್ನು ಸಡಿಲಿಸಿ ಅಂತಹ ಜಮೀನುಗಳನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. |
| (ಆ) | ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ಜಮೀನನ್ನು ಖಾಸಗಿ ಸಂಘ ಸಂಸ್ಥೆಗಳು ಸಾರ್ವಜನಿಕ ಉದ್ದೇಶಕ್ಕಾಗಿ ಮಂಜೂರಾತಿಗೆ ಕೋರಿಕೆ ಸಲ್ಲಿಸಿದ ಸಂದರ್ಭದಲ್ಲಿ ಈ ಮೊದಲಿನ ನಿಯಮಾವಳಿಯಂತೆ ಕೃಷಿ ಜಮೀನಿನ ಮಾರಾಟದ ಅಂಕಿ-ಅಂಶದ ಆಧಾರದಲ್ಲಿ ಸ್ಥಳ ಮೌಲ್ಯ ನಿಗದಿಪಡಿಸಲಾಗುತ್ತಿದ್ದು, ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ:ಎಲ್‌ಎಸ್‌ಡಿ (1ಬಿ) ಐಡಿಆರ್ 1/2020 ಬಿ 6 ದಿನಾಂಕ:21.12.2020ರ ಅನ್ವಯ ಸರ್ಕಾರಿ ಜಮೀನು ಮಾರಾಟದ ಸಂದರ್ಭದಲ್ಲಿ ವಾಣಿಜ್ಯ ದರ ಆಧಾರದಲ್ಲಿ ಸ್ಥಳ ಮೌಲ್ಯ ನಿಗದಿಪಡಿಸುವಂತೆ ನಿರ್ದೇಶನ ನೀಡಿರುವುದರಿಂದ ಸಂಘ-ಸಂಸ್ಥೆಗಳ ಹೆಚ್ಚಿನ ಸ್ಥಳ ಮೌಲ್ಯ ಪಾವತಿಸುವ ಸಮಸ್ಯೆ ಎದುರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಯವರ ಪತ್ರ ಸಂಖ್ಯೆ: ಎಲ್.ಎನ್.ಡಿ (1ಬಿ) ಪಿ.ಡಿ.ಆರ್: 01/2020/ಬಿ6 ದಿನಾಂಕ: 21-12-2020 ರಂತೆ ಮಂಜೂರಾತಿ ಜಮೀನುಗಳನ್ನು ಖಾಸಗಿ ಸಂಘ ಸಂಸ್ಥೆಗಳು ಕೃಷಿಯೇತರ ಲಾಭದಾಯಕ ಉದ್ದೇಶಗಳಿಗೆ ಬಳಸುವುದರಿಂದ ಖಾಸಗಿ ಸಂಸ್ಥೆಗಳನ್ನು ಒಳಗೊಂಡಂತೆ ಇತರೆ ಎಲ್ಲಾ ಖಾಸಗಿ ಸಂಘ ಸಂಸ್ಥೆಗಳಿಗೆ ಜಮೀನು ಮಂಜೂರಾತಿಗೆ ಪ್ರಸ್ತಾಪಿಸುವಾಗ ವಾಣಿಜ್ಯ ಜಮೀನು ಮಾರಾಟದ ಅಂಕಿ ಅಂಶದೊಂದಿಗೆ ವಾಣಿಜ್ಯ ದರದ ಆಧಾರದಲ್ಲಿ ಸ್ಥಳ ಮೌಲ್ಯ ನಿಗದಿಪಡಿಸಲು ಸಹಾಯಕ ಆಯುಕ್ತರು ಮಂಗಳೂರು, ಪುತ್ತೂರು ಮತ್ತು ಜಿಲ್ಲೆಯ ಎಲ್ಲಾ ತಹಶೀಲ್ದಾರರುಗಳಿಗೆ ನಿರ್ದೇಶನ ನೀಡಿರುತ್ತಾರೆ.<br><br>ಪ್ರಸ್ತುತ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ಕ್ಕೆ ತಿದ್ದುಪಡಿ ತಂದು, ನಿಯಮ 22ಎ(1) ರಲ್ಲಿ ನಿಗಧಿಪಡಿಸಿರುವಂತೆ ಖಾಸಗಿ ಸಂಘ ಸಂಸ್ಥೆಗಳ ವಿವಿಧ ಉದ್ದೇಶಗಳಿಗೆ ಜಮೀನು ಮಂಜೂರು ಮಾಡಲು ಸ್ಥಳ ಮೌಲ್ಯವನ್ನು ನಿಗದಿಪಡಿಸಲಾಗುತ್ತಿದೆ. |
| (ಇ) | ಬಂದಿದ್ದಲ್ಲಿ, ಈ ಹಿಂದಿನಂತೆ ಸ್ಥಳ ಮೌಲ್ಯ ನಿಗದಿಪಡಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು) | |

(ಕಡತ ಸಂಖ್ಯೆ:ಕಂಇ 107 ಎಲ್‌ಜಿಎ 2023)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು